ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 11–7–2016

**ಪತ್ರಿಕಾ ಪ್ರಕಟಣೆ**

# ಕೆ.ಓ.ಎಸ್. ಪರೀಕ್ಷಾ ಫಲಿತಾಂಶ

**ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಜೂನ್–2016ರ ಮಾಹೆಯಲ್ಲಿ ನಡೆಸಿದ ಕರ್ನಾಟಕ ಮುಕ್ತ ಶಾಲೆ (ಕೆ.ಓ.ಎಸ್) ಪೂರಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ:12.07.2016 ರಂದು ಮಧ್ಯಾಹ್ನ 2–00 ಘಂಟೆಗೆ ರಾಜ್ಯದ ಎಲ್ಲಾ ಕರ್ನಾಟಕ ಮುಕ್ತ ಶಾಲೆ (ಕೆ.ಓ.ಎಸ್) ಕಲಿಕಾ ಕೇಂದ್ರಗಳಲ್ಲಿ ಪ್ರಕಟಿಸಲು ಕರ್ನಾಟಕ ಮುಕ್ತ ಶಾಲೆ (ಕೆ.ಓ.ಎಸ್) ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ನಿರ್ದೇಶಕರು(ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರು ತಿಳಿಸಿದ್ದಾರೆ.

ಬಾಬು/ಕೆಎಂ

# KOS Results

Bangalore, July 11 (Karnataka Information)

Results of Karnataka Open School (KOS) Supplementary Examination conducted by Karnataka Secondary Education Examination Board, Bangalore during June-2016, are sent to all the respective KOS Study Centers to announce the results on 12.07.2016 at 2-00 PM in the respective KOS Study Centers by Karnataka Open School-KOS Co-ordinators, as per the statement of Director(Other Exams), Karnataka Secondary Education Examination Board, Bangalore.

BABU/KM

# ರಂಗಶಿಕ್ಷಣದಲ್ಲಿ ಡಿಪ್ಲೋಮಾ

**ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರವು ಸ್ಥಾಪಿಸಿರುವ ರಂಗಾಯಣವು **ಭಾರತೀಯ ರಂಗಶಿಕ್ಷಣ ಕೇಂದ್ರ** –"ರಂಗ ಶಾಲೆ" ಯನ್ನು ಕಳೆದ ಆರು ವರ್ಷಗಳಿಂದ ನಡೆಸುತ್ತಿದೆ. ಈ ವರ್ಷದಿಂದ ಈ ಕೋರ್ಸಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡಿದೆ. ಇದು ಏಳನೇ ವರ್ಷ. **'ಒಂದು ವರ್ಷದ ರಂಗಶಿಕ್ಷಣದಲ್ಲಿ ಡಿಪ್ಲೋಮಾ'** ಕೋರ್ಸ್‌ನ್ನು 01–07–2010 ರಿಂದ ಆರಂಭಿಸಿದೆ. 2016–17ನೇ ಸಾಲಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ರಂಗಶಾಲೆಗೆ ಸೇರಬಯಸುವ ವಿದ್ಯಾರ್ಥಿಗಳು ಕನಿಷ್ಠ ವಿದ್ಯಾರ್ಹತೆ ದ್ವಿತೀಯ ಪಿ.ಯು.ಸಿ. (10+2) ಹೊಂದಿರುವ, 18 ತುಂಬಿದ 28 ವರ್ಷದೊಳಗಿನವರು ಅರ್ಜಿಯನ್ನು ಸಲ್ಲಿಸಬಹುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.2,500/–ವಿದ್ಯಾರ್ಥಿವೇತನ ಹಾಗೂ ಉಚಿತ ವಸತಿಯನ್ನು ನೀಡಲಾಗುವುದು. ರಂಗಶಾಲೆಗೆ ಸೇರಬಯಸುವ ವಿದ್ಯಾರ್ಥಿಗಳು ದಿನಾಂಕ:25–07–2016 ರೊಳಗೆ ರಂಗಾಯಣದ ವೆಬ್‌ಸೈಟ್ www.rangayana.org ನಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯೊಂದಿಗೆ ರೂ.50/–ಡಿ.ಡಿ.ಯನ್ನು ನಿರ್ದೇಶಕರು, ರಂಗಾಯಣ, ಕಲಾಮಂದಿರ ಆವರಣ, ವಿನೋಬಾ ರಸ್ತೆ, ಮೈಸೂರು–570005 ಎಂಬ ಹೆಸರಿನಲ್ಲಿ ಪಡೆದು ಅಗತ್ಯ ದಾಖಲೆಗಳನ್ನು ಸದರಿ ರಂಗಾಯಣದ ವಿಳಾಸಕ್ಕೆ ಸ್ಪೀಡ್ ಪೋಸ್ಟ್ ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ರಂಗಾಯಣದ ಕಛೇರಿಯ ಅವಧಿಯಲ್ಲಿ ಖುದ್ದಾಗಿ ಬಂದು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಬಹುದು. ದಿನಾಂಕ:30–07–2016 ಹಾಗೂ 31–07–2016 ರಂದು ರಂಗಾಯಣದ ಆವರಣದಲ್ಲಿ ನಡೆಸಲಾಗುವುದು. ಅಭ್ಯರ್ಥಿಯು ತನ್ನ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ರಂಗಶಾಲೆಯ ಪ್ರಾರಂಭ ದಿನಾಂಕ: 08–08–2016. ಆಯ್ಕೆಯಾದ ವಿದ್ಯಾರ್ಥಿಗಳು ದಿನಾಂಕ: 07–08–2016 ರೊಳಗೆ ಶಾಲೆಗೆ ಪ್ರವೇಶವನ್ನು ಪಡೆದುಕೊಳ್ಳಬೇಕು. ಹೆಚ್ಚಿನ ವಿವರಕ್ಕಾಗಿ ರಂಗಾಯಣ ಕಛೇರಿಯ ದೂರವಾಣಿ: 0821–2512639ನ್ನು ಸಂಪರ್ಕಿಸುವುದು.

**ಬಾಬು/ಕೆಎಂ**

# ಎಲ್ಲಾ ಎಪಿಎಂಸಿಗಳಲ್ಲಿ
# ಕಡಿಮೆ ಬೆಲೆಗೆ ತೊಗರಿ ಬೇಳೆ ಮಾರಾಟ

**ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)**

**ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರು ಬೇಳೆ ಖರೀದಿಸಲು ಸಾಧ್ಯವಾಗದಷ್ಟು ದುಬಾರಿಯಾಗಿದ್ದ ಹಾಗೂ ಕಾಳಸಂತೆಕೋರರು ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ದರದಲ್ಲಿ ಬೇಳೆಕಾಳುಗಳನ್ನು ಮಾರಾಟ ಮಾಡುತ್ತಿದ್ದ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಎಪಿಎಂಸಿಗಳಲ್ಲಿ ತೊಗರಿಬೇಳೆಯನ್ನು ಪ್ರತಿ ಕೆ.ಜಿ.ಗೆ ರೂ 130/– ರಂತೆ**

ಸಾರ್ವಜನಿಕರಿಗೆ ಮಾರಾಟ ಮಾಡಲು ಮಳಿಗೆಗಳನ್ನು ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಜುಲೈ 8 ರಿಂದ ನಗರದ ಯಶವಂತಪುರದ ಎಪಿಎಂಸಿ ಯಾರ್ಡ್ ಮತ್ತು ನ್ಯೂ ತರಗುಪೇಟೆಯಲ್ಲಿ ತೊಗರಿಬೇಳೆಯ ಚಿಲ್ಲರೆ ಮಾರಾಟ ಮಳಿಗೆಯನ್ನು ಪ್ರಾರಂಭಿಸಲಾಗಿದೆ. ಶಿವಲಿಂಗು ವೆರೈಟಿ ತೊಗರಿಬೇಳೆಯನ್ನು ಪ್ರತಿ ಕೆ.ಜಿ.ಗೆ ರೂ. 130/- ರಂತೆ ಖರೀದಿಸಬಹುದಾಗಿದೆ.

ಬಾಬು:ಜಿಪಿಆರ್.

# ಉದ್ಯೋಗ ಮೇಳ

ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳು, ಏಷ್ಯಾಟಿಕ್ ಕಟ್ಟಡ,2ನೇಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು – 560 009 ಹಾಗೂ ಖಾಸಗಿ ನಿಯೋಜಕರುಗಳ ಸಂಯುಕ್ತ ಆಶ್ರಯದಲ್ಲಿ ನಿರುದ್ಯೋಗಿ ಯುವಕ/ಯುವತಿಯರಿಗೆ ನೇರ ಸಂದರ್ಶನಕ್ಕೆ ಅನುಕೂಲವಾಗುವಂತೆ ಜುಲೈ 15 ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಯಿಂದ ಅಪರಾಹ್ನ 4–00 ಗಂಟೆಯವರೆಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ), ಆವರಣ, ಹೊಸೂರು ರಸ್ತೆ, ಡೈರಿ ಸರ್ಕಲ್, ಬೆಂಗಳೂರು – 560 029 ಇಲ್ಲಿ "ವಿಶ್ವ ಯುವ ಕೌಶಲ್ಯ ದಿನಾಚರಣೆ" ಅಂಗವಾಗಿ "ಉದ್ಯೋಗ ಮೇಳ" ವನ್ನು ಹಮ್ಮಿಕೊಳ್ಳಲಾಗಿದೆ.

ಈ ಉದ್ಯೋಗ ಮೇಳದಲ್ಲಿ ಖಾಸಗಿ ವಲಯದ 25ಕ್ಕೂ ಹೆಚ್ಚು ಹೆಸರಾಂತ ಸಂಸ್ಥೆಗಳು ಭಾಗವಹಿಸುತ್ತಿದ್ದು, ವಿವಿಧ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸ್ಥಳದಲ್ಲೇ ನೇರವಾಗಿ ಆಯ್ಕೆ ಮಾಡಲಿದ್ದಾರೆ.

ಅಕ್ಷರಸ್ಥರು, ಅರ್ಧದಲ್ಲಿಯೇ ಶಾಲೆ ಬಿಟ್ಟವರು ಹಾಗೂ ಎಸ್.ಎಸ್.ಎಲ್.ಸಿ. ಫೇಲ್,ಎಸ್.ಎಸ್.ಎಲ್.ಸಿ. ಪಾಸ್, ಪಿ.ಯು.ಸಿ. ಐ.ಟಿ.ಐ ಮತ್ತು ಡಿಪ್ಲೋಮಾ (ಎಲ್ಲಾ ಟ್ರೇಡ್‌ಗಳು) ಮತ್ತು ಪದವೀಧರರು ಹಾಗೂ ಸ್ನಾತಕೋತ್ತರ ಪದವಿ ಹೊಂದಿದವರಿಗೆ ಉದ್ಯೋಗ ಅವಕಾಶಗಳು ಲಭ್ಯವಿದೆ. ಉದ್ಯೋಗಾಕಾಂಕ್ಷಿಗಳು ತಮ್ಮ ವೈಯಕ್ತಿಕ (ಬಯೋಡಾಟಾ) ವಿವರಗಳೊಂದಿಗೆ "ಉದ್ಯೋಗ ಮೇಳ" ದಲ್ಲಿ ಭಾಗವಹಿಸಿ ಉದ್ಯೋಗ ದೊರೆಯುವ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದೆ.

ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ದೂರವಾಣಿ ಸಂಖ್ಯೆ 22289668/22261184/22374582/22268846/22259351 ಗಳ ಮೂಲಕ ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

# ಕೀ ಉತ್ತರ ಪ್ರಕಟ

**ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗವು ಜುಲೈ 7 ರಂದು ನಡೆಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಸ್ಪರ್ಧಾತ್ಮಕ ಪರೀಕ್ಷೆಯ ಕೀ ಉತ್ತರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ. ಜುಲೈ 18 ರಂದು ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು ಇವರಿಗೆ ತಿಳಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ನೋಡಬಹುದು.**

**ಬಾಬು/ಕೆಎಂ**

# ಸಾಕ್ಷ್ಯಚಿತ್ರ ಪ್ರಸಾರ

**ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)**

ನಾಡಿನ ಕಲೆ, ಸಾಹಿತ್ಯ, ಕ್ರೀಡೆ, ಸಾಮಾಜಿಕ ಅಭಿವೃದ್ಧಿ, ವಿಜ್ಞಾನ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ / ವಿಶಿಷ್ಟ ಸಾಧನೆಗೈದ, ನಾಡಿನ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ, ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ಪಡೆದಿರುವ ಹಾಗೂ ವಿಶೇಷ ಸಾಧನೆಗೈದ ಸಾಧಕರ ಜೀವನ – ಸಾಧನೆಗಳನ್ನು ಪರಿಚಯಿಸುವ ಸಾಕ್ಷ್ಯಚಿತ್ರಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನಿರ್ಮಿಸಿ, "ನೆಲದ ಸಿರಿ" ಮಾಲಿಕೆಯಡಿ ದೂರದರ್ಶನದ ಚಂದನ ವಾಹಿನಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ ಸಂಜೆ 6.45 ರಿಂದ 7.00 ಗಂಟೆವರೆಗೆ ಪ್ರಸಾರ ಮಾಡುತ್ತಿದೆ.

ಅದರಂತೆ ಈ ವಾರ ಪ್ರಸಾರವಾಗಲಿರುವ ಸಾಕ್ಷ್ಯಚಿತ್ರಗಳು ಕೆಳಕಂಡಂತಿದೆ.

| ಕ್ರ.ಸಂ. | ಸಂಚಿಕೆಯ ಹೆಸರು | ಪ್ರಸಾರದ ದಿನಾಂಕ |
|---|---|---|
| 1 | ನೆಲದ ಸಿರಿ ಸಂಚಿಕೆ -522<br>ಶ್ರೀ ಗರ್ತಿಕೆರೆ ರಾಘಣ್ಣ | 11-07-2016,<br>ಸೋಮವಾರ |
| 2 | ನೆಲದ ಸಿರಿ ಸಂಚಿಕೆ -523<br>ಆಡಾಡತಾ ವಿಜ್ಞಾನ | 12-07-2016,<br>ಮಂಗಳವಾರ |
| 3 | ನೆಲದ ಸಿರಿ ಸಂಚಿಕೆ -524<br>ಆಡಾಡತಾ ವಿಜ್ಞಾನ | 13-07-2016,<br>ಬುಧವಾರ |
| 4 | ನೆಲದ ಸಿರಿ ಸಂಚಿಕೆ -525<br>ಆಡಾಡತಾ ವಿಜ್ಞಾನ | 14-07-2016,<br>ಗುರುವಾರ |
| 5 | ನೆಲದ ಸಿರಿ ಸಂಚಿಕೆ -526<br>ಆಡಾಡತಾ ವಿಜ್ಞಾನ | 15-07-2016,<br>ಶುಕ್ರವಾರ |

## ವಿಧಾನ ಪರಿಷತ್ ಕಲಾಪ ವರದಿ:

## ನಿಯಮ 59 ರಡಿ ಗಣಪತಿ ಆತ್ಯಹತ್ಯೆ ಪ್ರಕರಣ ಕುರಿತು ಚರ್ಚಿಸಲು ಅವಕಾಶವಿಲ್ಲ

ಕರ್ನಾಟಕ ವಾರ್ತೆ: ಬೆಂಗಳೂರು ಜುಲೈ 11: ನಿಯಮ 59 ರಡಿ ವಿಶೇಷ ಪ್ರಕರಣಗಳನ್ನು ಮಾತ್ರ ಚರ್ಚಿಸಲು ಅವಕಾಶವಿರುವ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಡಿವೈಎಸ್‌ಪಿ ಎಂ.ಕೆ. ಗಣಪತಿ ಅವರ ಪ್ರಕರಣವನ್ನು ಈ ನಿಯಮದಡಿಯಲ್ಲಿ ಚರ್ಚಿಸಲು ಅವಕಾಶವಿಲ್ಲ. ಹಾಗಾಗಿ ಈ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ನೀಡಬಾರದೆಂದು ಆರೋಗ್ಯ ಕುಟುಂಬ ಕಲ್ಯಾಣ ಸಚಿವರಾದ ಕೆ.ಆರ್. ರಮೇಶ್‌ಕುಮಾರ್ ಅವರು ವಿಧಾನ ಪರಿಷತ್ತಿನ ಸಭಾಪತಿ ಅವರಿಗೆ ಮನವಿ ಮಾಡಿದರು.

ವಿಧಾನ ಪರಿಷತ್ತಿನಲ್ಲಿಂದು ವಿರೋಧ ಪಕ್ಷದ ನಾಯಕರಾದ ಕೆ.ಎಸ್. ಈಶ್ವರಪ್ಪ ಅವರು ಇತ್ತೀಚೆಗೆ ಆತ್ಮಹತ್ಯೆಗೆ ಶರಣಾದ ಡಿವೈಎಸ್‌ಪಿ ಎಂ.ಕೆ. ಗಣಪತಿ ಅವರ ಪ್ರಕರಣದ ಮೇಲೆ ನಿಯಮ 59 ರಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಿಳುವಳಿ ಸೂಚನೆಗಾಗಿ ಪ್ರಸ್ತಾಪವನ್ನು ಮುಂದಿಟ್ಟ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ನಾಯಕರು ಹಾಗೂ ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್ ಅವರು ಕೆಳಮನೆಯಲ್ಲಿ ಉತ್ತರ ನೀಡುತ್ತಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಪರವಾಗಿ ಸಚಿವರು ಉತ್ತರಿಸುತ್ತಾ, ವಿರೋಧ ಪಕ್ಷದವರು ಈ ನಿಯಮದಡಿ ಡಿ.ವೈ.ಎಸ್.ಪಿ, ಅನುಪಮ. ಕಲ್ಲಪ್ಪ, ಜಿಲ್ಲಾಧಿಕಾರಿ, ಶಿಖ, ಹಾಗೂ ಗಣಪತಿ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕೋರಿಕೆ ಸಲ್ಲಿಸುತ್ತಿದ್ದಾರೆ. ಆದರೆ ನಿಯಮ 59 ರಡಿ ಅತ್ಯಂತ ವಿಶೇಷ ಪ್ರಕರಣವಾದ ಒಂದು ವಿಷಯಕ್ಕೆ ಮಾತ್ರ ಸೀಮಿತವಾಗಿ ಚರ್ಚೆ ನಡೆಸಲು ಅವಕಾಶವಿದೆ.

ಆದರೆ ಈ ಪ್ರಕರಣವನ್ನು ಅತ್ಯಂತ ವಿಶೇಷ ಪ್ರಕರಣವೆಂದು ಪರಿಗಣಿಸಲು ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಅವಕಾಶ ನೀಡದಿರುವುದು ಸಮಂಜಸವೆಂದರು.

ಗಣಪತಿಯವರ ಸಾವು ಯಾರಿಗೂ ಸಂತೋಷವನ್ನು ಉಂಟು ಮಾಡಿಲ್ಲ. ಗಣಪತಿಯವರ ಸಾವನ್ನು ಅಸ್ವಭಾವಿಕ ಸಾವೆಂದು ದಾಖಲಿಸಲಾಗಿದ್ದು, ಪ್ರಕರಣವನ್ನು ಸಿ.ಐ.ಡಿ ಗೆ ವಹಿಸಲಾಗಿದೆ. ನಮ್ಮ ರಾಜ್ಯದಲ್ಲಿ ನಿಷ್ಠಾವಂತ ಪೊಲೀಸ್ ಅಧಿಕಾರಿಗಳಿಗೆ ಕೊರತೆಯಿಲ್ಲ. ಇಲಾಖೆಯ ನೈತಿಕ ಬಲವನ್ನು ಕುಗ್ಗಿಸುವ ಪ್ರಯತ್ನವನ್ನು ವಿರೋಧ ಪಕ್ಷದವರು ಮಾಡಬಾರದು. ಅವರು ಖಂಡಿತವಾಗಿ ನಿಶ್ಪಕ್ಷಪಾತವಾಗಿ ತನಿಖೆಯನ್ನು ಮಾಡಲಿದ್ದಾರೆ ಎಂದರು.

ಇದುವರೆವಿಗೆ ನಮ್ಮ ಸರ್ಕಾರವು ಐದು ಪ್ರಕರಣಗಳನ್ನು ಸಿ.ಬಿ.ಐ ಗೆ ವಹಿಸಿದೆ, ಆದರೆ ಆ ಪ್ರಕರಣಗಳ ತನಿಖೆಯ ವರದಿಯು ಇದುವರೆವಿಗೆ ಬಂದಿರುವುದಿಲ್ಲ. ಯಾರೂ ಸುಮ್ಮನೆ ತನ್ನ ಜೀವನವನ್ನು ಅಂತ್ಯಗೊಳಿಸಿಕೊಳ್ಳಲು ಬಯಸುವುದಿಲ್ಲ. ನಮ್ಮೆಲ್ಲರಿಗಿಂತ ಅವರ ಕುಟುಂಬದವರಿಗೆ ಇದರಿಂದ ಹೆಚ್ಚಿನ ನೊವುಂಟಾಗಿರುತ್ತದೆ. ಮಾನವೀಯತೆಯನ್ನು ಹೊಂದಿರುವ ನಾವು ಕೂಡ ಈ

ವಿಚಾರದ ಬಗ್ಗೆ ಚರ್ಚಿಸಲು ಸಿದ್ಧರಿದ್ದೇವೆ. ಆದರೆ ನಿಯಮ 59 ರಡಿ ಬದಲು ಬೇರೆ ನಿಯಮದಡಿ ಅವಕಾಶ ಮಾಡಿಕೊಳ್ಳೋಣ, ನಿಮ್ಮ ಬಳಿ ಗಣಪತಿ ಅವರ ಸಾವಿಗೆ ನ್ಯಾಯ ಒದಗಿಸುವಂತಹ ಸಾಕ್ಷ್ಯಗಳೇನಾದರು ಇದ್ದಲ್ಲಿ ಸದನದ ಗಮನಕ್ಕೆ ತರುವಂತೆ ಸಚಿವರು ವಿರೋಧ ಪಕ್ಷದವರನ್ನು ಕೋರಿದರು.

ಸಚಿವರ ಮನವಿಗೆ ಒಪ್ಪದ ವಿರೋಧ ಪಕ್ಷದ ಸದಸ್ಯರು ಗಣಪತಿ ಅವರು ಖಾಸಗಿ ಚಾನೆಲ್ ಒಂದರಲ್ಲಿ ತನ್ನ ಸಾವಿಗೆ ಯಾರು ಕಾರಣರೆಂದು ಹೇಳಿದ್ದಾರೊ ಅವರ ಮೇಲೆ ಎಫ್.ಐ.ಆರ್. ಹಾಗಿ ಅವರ ಮೇಲೆ ಕ್ರಿಮಿನಲ್ ಕೇಸನ್ನು ದಾಖಲಿಸುವ ತನಕ ತಮ್ಮ ಹೋರಾಟವನ್ನು ಮುಂದುವರೆಸುವುದಾಗಿ ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಸಭಾಪತಿ ಡಿ.ಹೆಚ್. ಶಂಕರಮೂರ್ತಿ ಅವರು ಸದನವನ್ನು ಮಧ್ಯಾಹ್ನಕ್ಕೆ ಮುಂದೂಡಿದರು.

ಪೂರ್ಣಿಮ

## ಪ್ರಮಾಣ ವಚನ

ಕರ್ನಾಟಕ ವಾರ್ತೆ: ಬೆಂಗಳೂರು ಜುಲೈ 11: ವಿಧಾನ ಪರಿಷತ್ತಿನ ನೂತನ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡರು ಇಂದು ವಿಧಾನ ಪರಿಷತ್ತಿನ ಸಭಾಪತಿ ಅವರ ಸಮ್ಮುಖದಲ್ಲಿ ವಿಧಾನ ಪರಿಷತ್ತಿನ ಕಾರ್ಯದರ್ಶಿಗಳಿಂದ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಪೂರ್ಣಿಮ